12) ಹೆಚ್. ವಿಕಾಂತಯ್ಯ
13) ಜಿ.ಜಿ. ಯಲ್ಲಿಗುತ್ತಿ
14) ಎನ್. ನಾರಾಯಣಸ್ವಾಮಿ
15) ಅಜಯಕುಮಾರ್ ಸರನಾಯಕ್
16) ಶಿವಾನಂದ ಎಚ್. ಕೌಜಲಗಿ
17) ಬಸವರಾಜ ಪಾಟೀಲ್ ಅಟ್ಟೂರ್
18) ಉಮೇಶ್ ಕತ್ತಿ
19) ಕೆ.ಎಸ್. ಈಶ್ವರಪ್ಪ
20) ಎ. ರುಕ್ಮಯ್ಯ ಪೂಜಾರಿ
21) ನಾರಾಯಣರಾವ್ ಮನಹಳ್ಳಿ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಅಧ್ಯಕ್ಷರು: ಮೇಲೆ ಉಲ್ಲೇಖಿಸಿರುವ ಸದಸ್ಯರುಗಳನ್ನು ಈ ದಿವಸದ ಕಾರ್ಯಕಲಾಪಗಳು ಮುಗಿಯುವವರೆಗೆ ಸಭೆಗೆ ಬಾರದಂತೆ ನಿಷೇಧಿಸಲಾಗಿದೆ.

(ಗೊಂದಲ)

ಅಧ್ಯಕ್ಷರು: ಸಭೆಯನ್ನು ಈಗ 10 ನಿಮಿಷಗಳ ಕಾಲ ಮುಂದೂಡುತ್ತೇನೆ.

(ಸದನವು ಮತ್ತೆ 12.05 ನಿಮಿಷಕ್ಕೆ ಸಮಾವೇಶಗೊಂಡಿತು- ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ಮುಂದೂಡಿರುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ: ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ಏತಕ್ಕೋಸ್ಕರ ಮುಂದೂಡಲಾಗಿದೆ?

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಕುಳಿತಿದ್ದ ಜನತಾ ದಳದ ಸದಸ್ಯರುಗಳು

"ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳು ಆಗಲೇಬೇಕು, ನ್ಯಾಯಾಂಗ ತನಿಖೆಯಾಗಲೇಬೇಕು, ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ, ಪ್ರಜಾಪ್ರಭುತ್ವ ವಿರೋಧಿ ಸರ್ಕಾರಕ್ಕೆ ಧಿಕ್ಕಾರ, ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡಿದ ಸರ್ಕಾರಕ್ಕೆ ಧಿಕ್ಕಾರ" ಇತ್ಯಾದಿ ಘೋಷಣೆಗಳನ್ನು ಹಾಕಿ ಎಂದು ಒಂದೇ ಸಮನೇ ಕೂಗುತ್ತಿದ್ದರು)

(ತದನಂತರ ಸದನದ ಕಾರ್ಯಕಲಾಪಗಳಿಗೆ ಅಡ್ಡಿಯನ್ನುಂಟು ಮಾಡುತ್ತಿದ್ದ ಜನತಾದಳದ ಸದಸ್ಯರನ್ನು ಹೊರಕ್ಕೆ ಹಾಕಬೇಕೆಂದು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಾರ್ಷಲ್ರವರು ತಮ್ಮ ಸಿಬ್ಬಂದಿಗಳೊಡನೆ ಮಾನ್ಯ ಸದಸ್ಯರುಗಳಾದ ಶ್ರೀ ಹಂಪನಗೌಡ, ಗುರುಪಾದಪ್ಪ ನಾಗಮಾರಪಲ್ಲಿ, ಪಿ.ಸಿ. ಸಿದ್ಧನಗೌಡರ್ ಮತ್ತು ಬಿ.ಹೆಚ್. ಬನ್ನಿಕೋಡ್ ಅವರುಗಳನ್ನು ಬಲವಂತವಾಗಿ ಎತ್ತಿಕೊಂಡು ಹೊರಕ್ಕೆ ಹಾಕಿದರು; ಹಾಗೆಯೇ ಜನತಾ ದಳದ ಇತರ ಸದಸ್ಯರುಗಳು ತಾವಾಗಿಯೇ ಹೊರಗೆ ನಡೆದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮಾತನಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಅವಕಾಶ ಕೊಡುವುದಿಲ್ಲ.

(ಮಾತನಾಡುವುದಕ್ಕೆ ಅವಕಾಶ ಕೊಡಲೇಬೇಕೆಂದು ಸನ್ಮಾನ್ಯ ಸದಸ್ಯರಾದ ಶ್ರೀ ವಾಟಾಳ್ನಾಗರಾಜ್ರವರು ಈ ಹಂತದಲ್ಲಿ ಒತ್ತಾಯಿಸುತ್ತಿದ್ದರು)

ಅಧ್ಯಕ್ಷರು : ಮೊದಲು ಪ್ರಶ್ನೋತ್ತರ ಅವಧಿ ಮುಗಿಯಲಿ, ನಂತರ ತಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ವೈ.ಕೆ. ರಾಮಯ್ಯ : ಅಧ್ಯಕ್ಷರೆ, ಇದು ನಾಚಿಕೇಗೇಡು. ನಿಮಗೆ ನಾಚಿಕೆಯಾಗುವುದಿಲ್ಲವೇ ?

(ಗೊಂದಲ)

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ವೈ.ಕೆ.ರಾಮಯ್ಯನವರು ಮತ್ತು ಜಾಲಪ್ಪನವರು ಸಭಾಧ್ಯಕ್ಷರ ಪೀಠದತ್ತ ತೆರಳಿ ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು : ಸದಸ್ಯರುಗಳಾದ ವೈ.ಕೆ. ರಾಮಯ್ಯ ಹಾಗೂ ಆರ್.ಎಲ್. ಜಾಲಪ್ಪನವರು ಪದೇ ಪದೇ ಕಾರ್ಯಕಲಾಪಗಳಿಗೆ ಅಡ್ಡಿಯುಂಟು ಮಾಡುತ್ತಿರುವುದರಿಂದ ಇವ್ಹೊತ್ತು ಅವರನ್ನು ಸದನದಿಂದ ಅಮಾನತ್ತುಗೊಳಿಸಲಾಗಿದೆ.

(ಈ ಹಂತದಲ್ಲಿ ಸನ್ಮಾನ್ಯ ಹಿರಿಯ ಸಚವರಾದಂಥ ಪ್ರೊ: ಎಂ.ಡಿ. ನಂಜುಂಡ ಸ್ವಾಮಿಯವರು ಸಭಾಧ್ಯಕ್ಷರ ಪೀಠದತ್ತ ತೆರಳಿ ಪ್ರಶ್ನೋತ್ತರ ಪಟ್ಟಿಯನ್ನು ಹರಿದು ಬಿಸಾಕಿ ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ : ತಮ್ಮ ಕೋಪ ಸ್ವಲ್ಪ ಕಡಿಮೆಯಾಗಬೇಕು, ತಮಗೇನಾದರೂ ರಕ್ತಮೊತ್ತಡವಿದ್ದರೆ ಅದು ಕಡಿಮೆಯಾಗಬೇಕು. ಈ ಸದನದಲ್ಲಿ ಹಿಂದೆಂದೂ ನಡೆಯದಂಥ ಕೋಲಾಹಲ ನಡೆದಿದೆ. ಆದುದರಿಂದ, ನಾನು ತಮ್ಮಲ್ಲಿ ಹೇಳುತ್ತಿದ್ದೇನೆ. ಇದು ಸರಿಯಾದಂಥ ಮಾರ್ಗ ಅಲ್ಲ, ತಮ್ಮಲ್ಲಿ ನಾನು ಕಳಕಳಿಯ ಮನವಿ ಮಾಡಿಕೊಳ್ಳುವುದೇನೆಂದರೆ.....

ಶ್ರೀ ಬಿ.ಎಸ್. ಯಡಿಯೂರಪ್ಪ : ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ನಡೆಸಬೇಕು. ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಸರಿಯಿಲ್ಲವೆಂದರೆ ಅಂತಹ ಪರಿಸ್ಥಿತಿ ಏನು ಬಂದಿದೆ? ಎಂಬುದರ ಬಗ್ಗೆ ಸದನಕ್ಕೆ ವರದಿ ಕೊಡಬೇಕು. ಪ್ರಶ್ನೋತ್ತರ ಅವಧಿಯನ್ನು ಸಸ್ಪೆಂಡ್ ಮಾಡಿ. ನೀವು ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಕಗ್ಗೊಲೆ ಮಾಡುತ್ತಿದ್ದೀರಿ, ಇದನ್ನು ಸಹಿಸುವುದಕ್ಕಾಗುತ್ತಿಲ್ಲ, ಇವ್ಹೊತ್ತು ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಕೆಟ್ಟಿದ್ದರೆ ಹೇಳಿ. ನಿಮಗೆ ವಿಕೇಂದ್ರೀಕರಣ ವ್ಯವಸ್ಥೆ ಬಗ್ಗೆ ವಿಶ್ವಾಸವಿಲ್ಲ.

(ಈ ಹಂತದಲ್ಲಿ ಸನ್ಮಾನ್ಯ ಸದಸ್ಯರಾದ ಶ್ರೀ ಬಿ.ಎಸ್ ಯಡಿಯೂರಪ್ಪನವರು ಸಭಾಧ್ಯಕ್ಷರ ಪೀಠದತ್ತ ತೆರಳಿ ನಿಂತು ಮಾತನಾಡುತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್ : ಯಾವ ಕಾರಣದಿಂದ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ಮುಂದೂಡಲಾಗಿದೆ? ಪ್ರಶ್ನೋತ್ತರ ಕಾಲವನ್ನು ಮುಂದೂಡಬೇಕು. ಇದರ ಬಗ್ಗೆ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ: ಯಡಿಯೂರಪ್ಪನವರೆ ಇತ್ತೀಚೆಗೆ ನಡೆದ ಗ್ರಾಮ ಪಂಚಾಯತಿ ಚುನಾವಣೆ ಫಲಿತಾಂಶದಲ್ಲಿ ಶೇಕಡ 31ರಷ್ಟಿದ್ದ ನಿಮ್ಮ ಪಕ್ಷದ (ಬಿ.ಜೆ.ಪಿ) ಬಲ ಶೇಕಡ 9ಕ್ಕೆ ಕುಸಿದಿದೆ.

(ಈ ಸಂದರ್ಭದಲ್ಲಿ ಆಡಳಿತ ಪಕ್ಷದ ಎಲ್ಲಾ ಸದಸ್ಯರುಗಳು ಮೇಜು ಕುಟ್ಟಿ ಸಂತೋಷ ವ್ಯಕ್ತಪಡಿಸಿದರು)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಎಲ್ಲಾ ಸದಸ್ಯರುಗಳನ್ನು ಹೊರಕ್ಕೆ ಹಾಕಿ, ಈ ಸದನದಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯಾಲಯವಾಗಿ ಮಾಡಬೇಡಿ. ಇವೊತ್ತಿನ ದಿವಸ ಪ್ರಜಾಪ್ರಭುತ್ವದ ಕೊಲೆಯಾಗಿದೆ.

(ಈ ಹಂತದಲ್ಲಿ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸಭಾಧ್ಯಕ್ಷರ ಪೀಠದ ಮುಂದೆ ನಿಂತು "ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿ ಚುನಾವಣೆಯನ್ನು ಮುಂದೂಡಿರುವಂತಾದ್ದು ಅತ್ಯಂತ ಅಪರಾಧವಾಗಿದ್ದು, ಇದು ಸರಿಯಲ್ಲ, ನೀವು ಸರ್ವಾಧಿಕಾರಿಯೇ? ಇವೊತ್ತು ಚುನಾವಣೆ ನಡೆಸುವುದಕ್ಕಾಗದೆ, ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಸರಿ ಮಾಡುವುದಕ್ಕಾಗದೆ ಹೇಗೆ ನೀವು ಅಧಿಕಾರದಲ್ಲಿ ಮುಂದುವರೆಯುತ್ತೀರಿ, ಇದನ್ನು ಪ್ರತಿಭಟಿಸಿ ನಾನು ಧರಣಿ ಮಾಡುತ್ತೇನೆ" ಎಂದು ಸದನದ ಬಾವಿಯಲ್ಲಿ ಧರಣಿ ಕುಳಿತರು)

ಶ್ರೀ ವಾಟಾಳ್ ನಾಗರಾಜ್: ತಮ್ಮ ಪ್ರಶ್ನೋತ್ತರಕ್ಕೆ ಬೆಂಕಿ ಹಚ್ಚಿ, ಯಾವ ಪ್ರಶ್ನೋತ್ತರ ಇದು? ಇದು ಸರಿಯಲ್ಲ, ಸರಿಯಾದ ನೀತಿಯಲ್ಲ.

(ಈ ಸಂದರ್ಭದಲ್ಲಿ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಪ್ರಶ್ನೋತ್ತರ ಪಟ್ಟಿಯನ್ನು ಸದನದಲ್ಲಿ ಹರಿದು ಬಿಸಾಡಿದರು)

(ಮಾನ್ಯ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು: ಯಡಿಯೂರಪ್ಪನವರೆ, ತಾವು ಪದೇ ಪದೇ ಸದನದ ಕಾರ್ಯಕಲಾಪಗಳಿಗೆ ಅಡ್ಡಿಯುಂಟು ಮಾಡುತ್ತಿರುವುದರಿಂದ ನಿಮ್ಮನ್ನು ಇವೊತ್ತು ಸದನದಿಂದ ಸಸ್ಪೆಂಡ್ ಮಾಡಲಾಗಿದೆ.

(ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಪ್ರತಿಭಟಿಸುತ್ತಾ ಸದನದಿಂದ ಹೊರ ನಡೆದರು)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾನು ತಮ್ಮನ್ನು ವಿನಯದಿಂದ ಕೈಮುಗಿದು ಪ್ರಾರ್ಥಿಸಿಕೊಳ್ಳುತ್ತಿದ್ದೇನೆ. ಈ ಪರಿಸ್ಥಿತಿಯನ್ನು ನಿನ್ನೆ ನೋಡಿದ್ದು ಆಯಿತು, ಇಂದೂ ನೋಡಿದ್ದಾಯಿತು.

ಅಧ್ಯಕ್ಷರು: ಈಗ ಏನೂ ರಿಕಾರ್ಡ್ಗೆ ಹೋಗುವುದಿಲ್ಲ ಯಾವುದನ್ನೂ ರಿಕಾರ್ಡ್ ಮಾಡಬಾರದು.

ಶ್ರೀ ವಾಟಾಳ್ ನಾಗರಾಜ್: ಈ ಸದನ ನಡೆಯುವಾಗ.....

ಅಧ್ಯಕ್ಷರು: ಇದು ಅತಿಶಯೋಕ್ತಿ ಆಗುತ್ತದೆ. ನಾನು ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ಇದೇ ರೀತಿ ಆಗಬೇಕು ಎಂದು ಹಠ ಮಾಡಿದರೆ ಆಗುವುದಿಲ್ಲ. ಪ್ರಶ್ನೋತ್ತರ ಮುಗಿಯಲಿ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ತಾವು ಈ ಸದನವನ್ನು ಕಾಪಾಡುವಂತಹವರು. ಆದರೆ ಎಲ್ಲಾ ಸದಸ್ಯರನ್ನು ಹೊರ ಹಾಕಿ ಈ ಸದನ ನಡೆಸುವುದು ಉಚಿತವೇ?

ಈ ದಿನ ಪ್ರಜಾಪ್ರಭುತ್ವದ ಕೊಲೆ ಆಗುತ್ತಿದೆ. ಶಾಸಕರಿಗೆ ರಕ್ಷಣೆ ಕೊಡಬೇಕು. ನೀವು ಈಗ ಈ ರೀತಿ ಮಾಡುತ್ತಿರುವುದು ಸರಿಯಲ್ಲ. ಇದು ಅಕ್ರಮ ಸಭೆ, ತಾವು ಅಕ್ರಮಕ್ಕೆ ದಾರಿ ಮಾಡಿಕೊಡಬಾರದು. ಈ ಸಭೆ ಸಂಪ್ರದಾಯ ಬಿಟ್ಟು ನಡೆಯುವಂತೆ ಆಗಬಾರದು. ಆದುದರಿಂದ ನಾನು ತಮ್ಮಲ್ಲಿ ಅತ್ಯಂತ ಕೃತಜ್ಞತೆಯಿಂದ ಮನವಿ ಮಾಡುತ್ತೇನೆ.....

ಅಧ್ಯಕ್ಷರು : ನೀವು ನನ್ನ ಮಾತನ್ನು ಕೇಳದಿದ್ದರೆ ನಾನು ಉಗ್ರವಾದ ಕ್ರಮವನ್ನು ತಮ್ಮ ಮೇಲೆ ಕೈಗೊಳ್ಳಬೇಕಾಗುತ್ತದೆ. ಶ್ರೀ ವಾಟಾಳ್ ನಾಗರಾಜ್‌ರವರು ಕಾರ್ಯಕಲಾಪಕ್ಕೆ ಬಹಳ ಅಡಚಣೆ ಉಂಟು ಮಾಡುತ್ತಿದ್ದಾರೆ. ಆದುದರಿಂದ ಇವತ್ತಿನ ಕಲಾಪಕ್ಕೆ ಅವರನ್ನು ಅಮಾನತ್ತು ಮಾಡಬೇಕೆಂದು ನಾನು ಹೇಳುತ್ತಿದ್ದೇನೆ.

(ಶ್ರೀ ವಾಟಾಳ್ ನಾಗರಾಜ್‌ರವರನ್ನು ಮಾರ್ಷಲ್ರವರು ಮತ್ತು ಅವರ ಸಿಬ್ಬಂದಿಯವರು ಅವರನ್ನು ಬಲವಂತವಾಗಿ ಎತ್ತಿಕೊಂಡು ಹೊರಕ್ಕೆ ಹಾಕಿದರು)

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾಧ ಉತ್ತರಗಳು.

ಗುಲ್ಬರ್ಗ ಜಿಲ್ಲೆಯಲ್ಲಿ ತೊಗರಿ ಬೆಳೆ ಪರಿಹಾರ ಧನ.

722 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲಬರ್ಗಾ ಜಿಲ್ಲೆಯಲ್ಲಿ ರೈತರಿಗೆ ತೊಗರಿ ಪರಿಹಾರ ಧನವನ್ನು ನೀಡುವ ಕುರಿತು ದಿನಾಂಕ 10-2-1994 ರಂದು ಸದನದಲ್ಲಿ ಚರ್ಚೆಗೆ ಬಂದಾಗ 2 ಕೋಟಿ 7 ಲಕ್ಷ 67 ಸಾವಿರ ಉಳಿದಿರುವ ಪರಿಹಾರ ಧನ ಅತಿ ಶೀಘ್ರದಲ್ಲಿ ವಿತರಣೆ ಮಾಡಲಾಗುತ್ತದೆಂದು ಆಶ್ವಾಸನೆ ನೀಡಿರುವುದು ನಿಜವೇ?*

ಆ) *ಅದರಲ್ಲಿ ಇಲ್ಲಿಯವರೆಗೆ ರೈತರಿಗೆ ಎಷ್ಟು ಪರಿಹಾರ ಧನ ವಿತರಣೆ ಮಾಡಲಾಗಿದೆ?*

ಇ) *ಈ ಉಳಿದಿರುವ 2 ಕೋಟಿ 7 ಲಕ್ಷ 67 ಸಾವಿರ ಹಣದಲ್ಲಿ ಕೇವಲ 56 ಲಕ್ಷ ರೂ. ಬಿಡುಗಡೆ ಮಾಡಲಾಗಿದೆಯೆಂದು ತಿಳಿದಿರುವುದು ನಿಜವೇ?*

ಈ) *ಈ ಪ್ರಕಾರ ಪೂರ್ತಿ ಹಣ ಬಿಡುಗಡೆ ಮಾಡದೆ ಸ್ವಲ್ಪ ಮಟ್ಟಿಗೆ ಬಿಡುಗಡೆ ಮಾಡಿರುವುದರಿಂದ, ರೈತರಿಗೆ ವಿತರಣೆ ಮಾಡುವಲ್ಲಿ ತಾರತಮ್ಯವಾಗುವುದಿಲ್ಲವೆ?*

ಉ) *ಹಾಗಿದ್ದಲ್ಲಿ, ಈಗಾಲಾದರೂ ಅತಿ ಶೀಘ್ರದಲ್ಲಿಯೇ ವಿತರಣೆ ಮಾಡುವ ವ್ಯವಸ್ಥೆ ಮಾಡಲಾಗುವುದೇ?*

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಹೌದು.

ಆ) ಉಳಿದಿರುವ ಹಣವಾದ 2.0767 ಕೋಟಿ ರೂ.ಗಳನ್ನು ಈಗಾಗಲೇ ಸರ್ಕಾರಿ ಆದೇಶ ದಿನಾಂಕ 22-3-94ರಲ್ಲಿ ಬಿಡುಗಡೆ ಮಾಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.